# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 530
2. ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 16.12.2021
4. ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆ ಒಳಗೊಂಡಂತೆ ರಾಜ್ಯದ ವಿವಿದೆಡೆ ಗಾಂಜಾ ಮಾರಾಟ ದಿನೇ ದಿನೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಿಂದ ಬೀದರ್ ಸೇರಿದಂತೆ ರಾಜ್ಯಾದ್ಯಂತ ಗಾಂಜಾ ವ್ಯಸನಿಗಳ ಸಂಖ್ಯೆ ಎಷ್ಟು ಹೆಚ್ಚಳವಾಗಿದೆ. ಈ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುತ್ತಿದೆ. |
| ಆ | ಬಹಳಷ್ಟು ಯುವ ಜನರು ದಾರಿತಪ್ಪಿ ಗಾಂಜಾ ವ್ಯಸನಿಗಳಾಗುತ್ತಿದ್ದು, ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ➢ ಮಾದಕ ದ್ರವ್ಯ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು ಹಾಗೂ ಪತ್ತೆ ಮಾಡಲು ಹಾಗೂ ಹದಿಹರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.<br>➢ ಅಧಿಕಾರಿ ಸಿಬ್ಬಂದಿಗಳಿಗೆ ಮಾದಕ ದ್ರವ್ಯ (ಡ್ರಗ್ಸ್)ಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸುವಂತೆ, ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆಹಚ್ಚಲು ಸೂಚಿಸಲಾಗಿದೆ.<br>➢ ಮಾದಕ ವಸ್ತುಗಳ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆಯಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲು ತನಿಖಾಧಿಕಾರಿಗಳಿಗೆ ಅಗತ್ಯ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ.<br>➢ ಬಾರ್ ಮತ್ತು ರೆಸ್ಟೋರೆಂಟ್, ಕಾಫಿ–ಡೇ, ಪಬ್, ಡಾನ್ಸ್‌ಬಾರ್ ಮುಂತಾದ ಯುವಕರು ಹೆಚ್ಚಾಗಿ ಸೇರುವ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲಾಗುತ್ತಿದೆ<br>➢ ವಿದೇಶಿಯರು ವಿಶೇಷವಾಗಿ ನೈಜೀರಿಯ ಪ್ರಜೆಗಳು ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿರುತ್ತದೆ.<br>➢ ಮಾದಕ ದ್ರವ್ಯದ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಶಾಲಾ–ಕಾಲೇಜುಗಳಲ್ಲಿ ಡ್ರಗ್ ಅವೇರ್‌ನೆಸ್ ಪ್ರೋಗ್ರಾಮ್ ಅನ್ನು ನಡೆಸಿ, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

➢ ಠಾಣಾ ಸರಹದ್ದುಗಳಲ್ಲಿ ಹೊಯ್ಸಳ, ಚೀತಾ, ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತಿನಲ್ಲಿರುವ ಸಮಯದಲ್ಲಿ ಶಾಲಾ, ಕಾಲೇಜುಗಳ ಬಳಿ ಸೂಕ್ಷ್ಮವಾಗಿ ಗಮನಿಸಿ ಅಪರಿಚಿತ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ.

➢ ಪ್ರತಿ ವರ್ಷ ಜೂನ್-26 ರಂದು ಅಂತರಾಷ್ಟ್ರೀಯ ಮಾದಕ ವಸ್ತು ಸೇವನೆ ವಿರೋಧಿ ದಿನವನ್ನಾಗಿ ಆಚರಣೆ ಮಾಡುತ್ತಿದ್ದು ಈ ಸಂಬಂಧ ಠಾಣಾಧಿಕಾರಿಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ ಮಾದಕ ವಸ್ತುಗಳನ್ನು ಸೇವನೆ ಮಾಡದಂತೆ ಅವರುಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗುತ್ತಿರುತ್ತದೆ.

➢ ಪ್ರಮುಖವಾಗಿ ಪಟ್ಟಣ ಪ್ರದೇಶಗಳಲ್ಲಿ ಶಾಲಾ ಕಾಲೇಜು, ನರ್ಸಿಂಗ್ ಕಾಲೇಜುಗಳ, ಹಾಸ್ಟಲ್‌ಗಳ, ಪ್ರವಾಸಿ ತಾಣಗಳ ಸಮೀಪ ನಡೆಸುತ್ತಿರುವ ಹೋಟೆಲ್/ಡಾಭಾಗಳ, ಪೆಟ್ಟಿಗೆ ಅಂಗಡಿಗಳ, ಚಹಾ ಅಂಗಡಿಯ ಮಾಲೀಕರಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡದಂತೆ ಸೂಕ್ತ ಎಚ್ಚರಿಕೆಗಳನ್ನು ನೀಡಲಾಗಿರುತ್ತದೆ.

➢ ರಾಜ್ಯದಲ್ಲಿ ಸಾರ್ವಜನಿಕರು ಮಾದಕ ವಸ್ತುಗಳ ಸಾಗಟಣೆ/ವ್ಯಸನದ ಬಗ್ಗೆ ರಹಸ್ಯ ಮಾಹಿತಿಗಳನ್ನು ಟೋಲ್ ಫ್ರೀ ಸಂಖ್ಯೆ. 1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

➢ ಮಾದಕ ವಸ್ತುಗಳು(ಗಾಂಜಾ) ಸರಬರಾಜು ಆಗುವ ಮಾರ್ಗಗಳ ಮೇಲೆ ತೀವ್ರ ನಿಗಾವಣೆ ಇಡಲಾಗಿದೆ.

➢ ಡಾರ್ಕ್ ನೆಟ್ (Darknet), ಮುಖಾಂತರ ಡ್ರಗ್ಸ್ ಸರಬರಾಜು ಜಾಲವನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ.

➢ ವಿದೇಶಗಳಿಂದ ಪೋಸ್ಟಲ್/ಕೊರಿಯರ್ಸ್ ಮುಖಾಂತರ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲಗಳ ಮೇಲೆ ನಿಗಾ ಇಡಲಾಗಿದೆ.

➢ ರಾಜ್ಯದಲ್ಲಿ ಡ್ರಗ್ಸ್ ಅಕ್ರಮಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ NCB, DRI, Customs, Railway, Education ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯನ್ನು ನಡೆಸಲಾಗಿದೆ.

➢ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ, ಠಾಣಾ ಮಟ್ಟದಲ್ಲಿ ಬಾತ್ಮಿದಾರರಿಂದ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

➢ ಮಾದಕ ದ್ರವ್ಯ ವ್ಯಸನದ ದುಷ್ಪರಿಣಾಮದ ಕುರಿತು ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ಪೋಸ್ಟರ್‌ಗಳನ್ನು ಜನಸಂದಣಿ ಇರುವ ಸ್ಥಳಗಳಲ್ಲಿ ಪ್ರದರ್ಶಿಸಿ ಅರಿವು ಮೂಡಿಸಲಾಗಿರುತ್ತದೆ.

➢ ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

➢ ಠಾಣಾ ಸರಹದ್ದಿನ ಬೀಟ್ ಮತ್ತು ಸಬ್-ಬೀಟ್‌ಗಳಲ್ಲಿ ಆಗ್ಗಿಂದಾಗ್ಗೆ ಸಭೆಯನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ➢ ಡ್ರಗ್ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.
- ➢ ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಸುತ್ತೋಲೆಯ ಮೂಲಕ ನಿರ್ದೇಶನ ನೀಡಲಾಗಿದೆ.
- ➢ ಒಂದು ಬಾರಿಗಿಂತ ಹೆಚ್ಚು ಬಾರಿ ಎನ್.ಡಿ.ಪಿ.ಎಸ್. ಪ್ರಕರಣಗಳಲ್ಲಿ ಬಾಗಿಯಾದ ಆರೋಪಿತರಿಗೆ PIT-NDPS ಹಾಗೂ ಗೂಂಡಾಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ.
- ➢ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅನಿರೀಕ್ಷಿತ ತಪಾಸಣೆ ಮಾಡಲಾಗುತ್ತಿದೆ.
- ➢ ಡಾಬಾಗಳು ಹಾಗೂ ಹೆದ್ದಾರಿ ಹೋಟೇಲ್‌ಗಳಲ್ಲಿ ಅನಿರೀಕ್ಷಿತ ತಪಾಸಣೆ ಕೈಕೊಳ್ಳಲಾಗುತ್ತಿದೆ.
- ➢ ಗಾಂಜಾ ಬೆಳೆಯುವವರ ಬಗ್ಗೆ ಬಾತ್ಮಿದಾರರಿಂದ ಸೂಕ್ಷ್ಮ ರೀತಿಯಿಂದ ಮಾಹಿತಿ ಸಂಗ್ರಹಿಸಿ ದಾಳಿ ಕೈಕೊಂಡು ಆರೋಪಿತರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.
- ➢ ಔಷಧ ನಿಯಂತ್ರಣ ಇಲಾಖೆಯೊಂದಿಗೆ ಸಂಪರ್ಕಿಸಿ ಅನಧಿಕೃತವಾದ ಮಾದಕ ದ್ರವ್ಯಗಳ [ಔಷಧಿಗಳ] ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಂತಹ ಅನಧಿಕೃತ ಔಷಧಿಗಳ ಸಂಗ್ರಹ, ಮಾರಾಟ, ಉತ್ಪಾದನೆ ಬಗ್ಗೆ ಮಾಹಿತಿ ಪಡೆದು ಕಾನೂನು ಕ್ರಮ ಜರುಗಿಸಲು ಕ್ರಮ ಕೈಕೊಳ್ಳಲಾಗುತ್ತಿರುತ್ತದೆ.
- ➢ ಸೋಶಿಯಲ್ ಮಿಡಿಯಾ ಮುಖಾಂತರವಾಗಿ ಎಸ್‌ಎಂಎಸ್/ವ್ಯಾಟ್ಸ್ಯಾಪ್ ಹಾಗೂ ಇನ್ನಿತರೇ ರೂಪದಲ್ಲಿ ಯುವ ಜನತೆಗೆ ತಲುಪುವ ಹಾಗೆ ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿ ಹೇಳಲಾಗುತ್ತಿದೆ.
- ➢ ನಗರಗಳಲ್ಲಿ ನಡೆಯುವ ಪಾರ್ಟಿ, ಇವೆಂಟ್‌ಗಳಲ್ಲಿ ಭಾಗವಹಿಸುವವರ ಮತ್ತು ಆಯೋಜಕರ ಮೇಲೆ ನಿಗಾ ಇಟ್ಟು ಇಂತಹ ಕಾರ್ಯಕ್ರಮಗಳಲ್ಲಿ ಗಾಂಜಾ ಮತ್ತು ಇನ್ನಿತರ ಮಾದಕ ವಸ್ತುಗಳ ಬಳಕೆಯಾಗದಂತೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಇ | ಕಳೆದ ಮೂರು ವರ್ಷದಿಂದ ಎಷ್ಟು ಜನ ಗಾಂಜಾ ಮಾರಾಟಗಾರರನ್ನು ಹಾಗೂ ವ್ಯಸನಿಗಳನ್ನು ಬಂಧಿಸಲಾಗಿದೆ; ಪ್ರಕರಣಗಳೆಷ್ಟು;

ಕಳೆದ ಮೂರು ವರ್ಷದಿಂದ ಗಾಂಜಾ ಮಾರಾಟಗಾರರನ್ನು ಹಾಗೂ ವ್ಯಸನಿಗಳನ್ನು ಬಂಧಿಸಿರುವ ಅಂಕಿ ಅಂಶ ಈ ಕೆಳಕಂಡಂತಿದೆ.

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಬಂಧಿಸಿರುವ ಗಾಂಜಾ ಮಾರಾಟಗಾರ ಸಂಖ್ಯೆ | ಬಂಧಿಸಿರುವ ಗಾಂಜಾ ವ್ಯಸನಿಗಳ ಸಂಖ್ಯೆ |
|---|---|---|---|
| 2018 | 1029 | 1393 | 365 |
| 2019 | 1653 | 1238 | 961 |
| 2020 | 4054 | 2234 | 2750 |
| 2021 | 4968 | 1793 | 3871 |

| | | |
|---|---|---|
| ಈ | ಸದರಿ ಪ್ರಕರಣಗಳಲ್ಲಿ ಕೈಗೊಂಡ ತನಿಖಾ ಕ್ರಮಗಳೇನು; ಎಷ್ಟು ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿದೆ; ಸದರಿ ಪ್ರಕರಣಗಳಲ್ಲಿನ ತನಿಖೆಯು ಯಾವ ಹಂತದಲ್ಲಿವೇ? (ಜಿಲ್ಲಾವಾರು ವಿವರ ನೀಡುವುದು) | ದಾಖಲಾದ ಡ್ರಗ್ಸ್ ಪ್ರಕರಣಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯನ್ನು ಅಳವಡಿಸಿ ತನಿಖೆ ಕೈಗೊಂಡು, ಆರೋಪಿಗಳನ್ನು ಬಂಧಿಸಿ, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ತನಿಖೆಯಲ್ಲಿರುವ ಪ್ರಕರಣಗಳಲ್ಲಿ, ಎಫ್‌ಎಸ್‌ಎಲ್ ವರದಿ ಹಾಗೂ ಸಾಕ್ಷ್ಯಾಧಾರ ಸಂಗ್ರಹಣೆಯ ಸಲುವಾಗಿ ತನಿಖೆಯಲ್ಲಿರುತ್ತವೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |

ಒಇ 30 ಪಿಎನ್‌ಡಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

<u>ಅನುಬಂಧ</u>

| ನಗರ /ಜಿಲ್ಲೆ. | 2018 | | | | | 2019 | | | | | 2020 | | | | | 2021 (ನವಂಬರ್ 30 ರವರೆಗೆ) | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | ದಾಖಲಾದ ಪ್ರಕರಣಗಳು | ಅಪರಾಧ ಸಾಬೀತಾದ ಪ್ರಕರಣಗಳು | ತನಿಖೆಯಲ್ಲಿರುವ ಪ್ರಕರಣಗಳು | ಬಂಧಿಸಿರುವ ಗಾಂಜಾ ಮಾರಾಟಗಾರರ ಸಂಖ್ಯೆ | ಬಂಧಿಸಿರುವ ಗಾಂಜಾ ವ್ಯಸನಿಗಳ ಸಂಖ್ಯೆ | ದಾಖಲಾದ ಪ್ರಕರಣಗಳು | ಅಪರಾಧ ಸಾಬೀತಾದ ಪ್ರಕರಣಗಳು | ತನಿಖೆಯಲ್ಲಿರುವ ಪ್ರಕರಣಗಳು | ಬಂಧಿಸಿರುವ ಗಾಂಜಾ ಮಾರಾಟಗಾರರ ಸಂಖ್ಯೆ | ಬಂಧಿಸಿರುವ ಗಾಂಜಾ ವ್ಯಸನಿಗಳ ಸಂಖ್ಯೆ | ದಾಖಲಾದ ಪ್ರಕರಣಗಳು | ಅಪರಾಧ ಸಾಬೀತಾದ ಪ್ರಕರಣಗಳು | ತನಿಖೆಯಲ್ಲಿರುವ ಪ್ರಕರಣಗಳು | ಬಂಧಿಸಿರುವ ಗಾಂಜಾ ಮಾರಾಟಗಾರರ ಸಂಖ್ಯೆ | ಬಂಧಿಸಿರುವ ಗಾಂಜಾ ವ್ಯಸನಿಗಳ ಸಂಖ್ಯೆ | ದಾಖಲಾದ ಪ್ರಕರಣಗಳು | ಅಪರಾಧ ಸಾಬೀತಾದ ಪ್ರಕರಣಗಳು | ತನಿಖೆಯಲ್ಲಿರುವ ಪ್ರಕರಣಗಳು | ಬಂಧಿಸಿರುವ ಗಾಂಜಾ ಮಾರಾಟಗಾರರ ಸಂಖ್ಯೆ | ಬಂಧಿಸಿರುವ ಗಾಂಜಾ ವ್ಯಸನಿಗಳ ಸಂಖ್ಯೆ |
| galuru City | 285 | 6 | 1 | 454 | 0 | 768 | 76 | 16 | 295 | 473 | 2766 | 625 | 137 | 460 | 2306 | 3893 | 428 | 861 | 595 | 3298 |
| suru City | 17 | 6 | 0 | 35 | 3 | 19 | 8 | 0 | 28 | 0 | 27 | 5 | 2 | 61 | 0 | 20 | 0 | 9 | 27 | 8 |
| balli Dharwad City | 22 | 0 | 0 | 45 | 0 | 16 | 0 | 0 | 40 | 0 | 24 | 0 | 2 | 76 | 0 | 45 | 0 | 15 | 83 | 4 |
| ngalore COP | 198 | 98 | 3 | 102 | 219 | 235 | 125 | 6 | 115 | 241 | 189 | 69 | 16 | 43 | 188 | 288 | 49 | 58 | 105 | 323 |
| agavi City | 23 | 2 | 0 | 82 | 16 | 14 | 4 | 0 | 28 | 8 | 15 | 0 | 6 | 38 | 0 | 11 | 0 | 6 | 22 | 2 |
| aburagi City | 3 | 0 | 0 | 5 | 0 | 3 | 0 | 0 | 10 | 0 | 17 | 0 | 0 | 31 | 0 | 13 | 0 | 10 | 35 | 0 |
| .F District | 2 | 0 | 0 | 5 | 0 | 1 | 0 | 0 | 1 | 0 | 5 | 0 | 1 | 21 | 0 | 9 | 0 | 9 | 9 | 0 |
| makuru District | 5 | 0 | 0 | 24 | 0 | 7 | 0 | 0 | 12 | 0 | 19 | 0 | 0 | 35 | 0 | 20 | 0 | 13 | 28 | 5 |
| ickballapura District | 8 | 0 | 2 | 7 | 0 | 15 | 0 | 2 | 23 | 0 | 28 | 0 | 0 | 53 | 0 | 23 | 0 | 11 | 46 | 0 |
| lar District | 11 | 0 | 0 | 21 | 0 | 6 | 0 | 0 | 16 | 0 | 17 | 0 | 1 | 26 | 0 | 25 | 0 | 16 | 40 | 0 |
| managara District | 12 | 0 | 0 | 10 | 0 | 26 | 0 | 0 | 50 | 0 | 34 | 0 | 0 | 61 | 3 | 32 | 4 | 20 | 41 | 8 |
| ngaluru District | 20 | 0 | 0 | 31 | 0 | 42 | 0 | 0 | 72 | 0 | 53 | 0 | 11 | 99 | 0 | 55 | 1 | 40 | 73 | 18 |
| ysuru District | 1 | 0 | 0 | 3 | 0 | 9 | 1 | 0 | 11 | 0 | 16 | 0 | 4 | 18 | 0 | 8 | 0 | 6 | 7 | 3 |
| andya District | 3 | 0 | 0 | 2 | 0 | 11 | 0 | 0 | 15 | 0 | 13 | 0 | 0 | 24 | 0 | 13 | 0 | 6 | 18 | 0 |
| DAGU District | 9 | 1 | 0 | 27 | 18 | 38 | 4 | 0 | 43 | 34 | 30 | 0 | 1 | 81 | 0 | 16 | 0 | 7 | 35 | 0 |
| hamarajanagar District | 22 | 5 | 0 | 56 | 0 | 10 | 0 | 0 | 14 | 0 | 27 | 0 | 6 | 40 | 0 | 23 | 0 | 16 | 31 | 0 |
| assan District | 46 | 0 | 0 | 12 | 0 | 7 | 0 | 0 | 14 | 0 | 33 | 0 | 0 | 61 | 0 | 38 | 0 | 27 | 42 | 13 |
| averi District | 4 | 0 | 0 | 5 | 0 | 1 | 0 | 0 | 2 | 0 | 8 | 0 | 0 | 8 | 0 | 4 | 0 | 4 | 5 | 0 |
| hitradurga District | 4 | 0 | 0 | 6 | 0 | 5 | 0 | 0 | 17 | 0 | 10 | 0 | 3 | 36 | 0 | 6 | 0 | 4 | 14 | 0 |
| avanagere District | 14 | 2 | 0 | 35 | 13 | 15 | 1 | 0 | 29 | 13 | 19 | 1 | 5 | 36 | 3 | 20 | 2 | 15 | 51 | 2 |
| hivamogga District | 70 | 1 | 0 | 129 | 0 | 52 | 0 | 1 | 111 | 0 | 89 | 0 | 33 | 193 | 0 | 114 | 0 | 96 | 107 | 108 |
| akshina Kannada Distct | 7 | 0 | 0 | 25 | 0 | 17 | 3 | 0 | 11 | 2 | 28 | 3 | 5 | 41 | 1 | 8 | 0 | 6 | 18 | 1 |
| hikkamagaluru District | 16 | 1 | 0 | 21 | 0 | 14 | 0 | 0 | 35 | 0 | 50 | 1 | 0 | 128 | 0 | 22 | 0 | 8 | 38 | 5 |
| Jttara Kannada District | 17 | 0 | 1 | 31 | 0 | 12 | 3 | 0 | 34 | 0 | 31 | 2 | 7 | 67 | 0 | 53 | 0 | 45 | 66 | 12 |
| Jdupi District | 105 | 73 | 0 | 29 | 96 | 203 | 147 | 0 | 37 | 190 | 249 | 131 | 10 | 68 | 242 | 63 | 15 | 14 | 27 | 61 |
| Bagalkot District | 3 | 0 | 0 | 4 | 0 | 8 | 0 | 0 | 17 | 0 | 20 | 0 | 0 | 40 | 0 | 8 | 0 | 2 | 17 | 0 |
| Gadag District | 3 | 0 | 0 | 4 | 0 | 2 | 0 | 0 | 2 | 0 | 10 | 0 | 0 | 18 | 0 | 12 | 0 | 7 | 16 | 0 |
| Dharwad District | 4 | 0 | 0 | 3 | 0 | 4 | 0 | 0 | 4 | 0 | 19 | 0 | 0 | 24 | 0 | 14 | 0 | 11 | 18 | 0 |
| Vijayapur District | 15 | 0 | 0 | 18 | 0 | 6 | 0 | 0 | 9 | 0 | 18 | 0 | 0 | 27 | 0 | 19 | 0 | 5 | 31 | 0 |
| Belagavi District | 24 | 3 | 0 | 47 | 0 | 25 | 0 | 1 | 41 | 0 | 57 | 0 | 3 | 99 | 0 | 25 | 0 | 17 | 37 | 0 |
| Yadgir District | 2 | 0 | 0 | 2 | 0 | 7 | 0 | 0 | 7 | 0 | 13 | 0 | 0 | 15 | 0 | 2 | 0 | 1 | 2 | 0 |
| Bidar District | 9 | 0 | 0 | 22 | 0 | 11 | 0 | 0 | 26 | 0 | 22 | 0 | 3 | 46 | 0 | 10 | 0 | 8 | 29 | 0 |
| Kalaburagi District | 10 | 0 | 0 | 15 | 0 | 13 | 0 | 0 | 21 | 0 | 28 | 0 | 7 | 35 | 7 | 14 | 0 | 9 | 25 | 0 |
| Koppal District | 2 | 0 | 0 | 15 | 0 | 4 | 0 | 0 | 6 | 0 | 8 | 0 | 0 | 12 | 0 | 3 | 0 | 0 | 3 | 0 |
| Raichur District | 6 | 0 | 0 | 14 | 0 | 3 | 0 | 0 | 4 | 0 | 22 | 0 | 0 | 29 | 0 | 5 | 0 | 1 | 6 | 0 |
| Ballari District | 23 | 0 | 0 | 41 | 0 | 13 | 0 | 0 | 26 | 0 | 38 | 0 | 0 | 80 | 0 | 22 | 0 | 1 | 34 | 0 |
| Railways | 4 | 0 | 0 | 6 | 0 | 11 | 0 | 0 | 12 | 0 | 2 | 0 | 0 | 4 | 0 | 12 | 0 | 8 | 12 | 0 |
| **TOTAL** | **1029** | **198** | **7** | **1393** | **365** | **1653** | **372** | **26** | **1238** | **961** | **4054** | **837** | **263** | **2234** | **2750** | **4968** | **499** | **1392** | **1793** | **3871** |